ದಿನಾಂಕಃ **10-06-2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಜಿ ಬಿ ಎ ವಕೀಲರಿಂದಃ

ನಾನು ಖಾಯಂ ವಾಸಿಯಾಗಿ ಬೋಚಿಹಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ ಎಂದರೆ ಸರಿ . ಚಿಕ್ಕಣ್ಣ ನವರು ತೀರಿ ಹೋದದ್ದು ಕರಡಾಳು ಗ್ರಾಮದಲ್ಲಿ ಎಂದರೆ ಸರಿ . ಗೋವಿಂದಯ್ಯ ರವರು ಸಹ ಕರಡಾಳು ಗ್ರಾಮದಲ್ಲಿ ತೀರಿಹೋಗಿದ್ದಾರೆ ಎಂದರೆ ಸರಿ . ಸದರಿ ಕರಡಾಳು ಗ್ರಾಮದಲ್ಲಿ ಚಿಕ್ಕಣ್ಣ ಬಿನ್ ಗೋವಿಂದಯ್ಯ ರವರ ಹೆಸರಿನಲ್ಲಿ ಹಲವಾರು ವ್ಯಕ್ತಿಗಳು ಇದ್ದಾರೆ ಎಂದರೆ ಸರಿಯಲ್ಲ. ಸದರಿ ಹೆಸರಿಗೆ ಸಂಬಂದಪಟ್ಟ ಹಾಗೆ ಬೋಚಿಹಳ್ಳಿ ಗ್ರಾಮದಲ್ಲೂ ಸಹ ಅನೇಕ ವ್ಯಕ್ತಿಗಳು ಇದ್ದಾರೆ ಎಂದರೆ ಸರಿಯಲ್ಲ. ನಿಪಿ.12 ವಂಶವೃಕ್ಷವನ್ನು ಈ ದಾವೆಯನ್ನು ಸಲ್ಲಿಸಿದ ಬಳಿಕ ಸಂಬಂದಪಟ್ಟ ಇಲಾಖೆಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ . ನಿಪಿ.14 ರಿಂದ 16 ರವರೆಗಿನ ದಾಖಲಾತಿಗಳು ಈ ದಾವಾ ಆಸ್ತಿಗೆ ಸಂಬಂದಪಟ್ಟಿಲ್ಲವೆಂದರೆ ಎಂದರೆ ಸರಿಯಲ್ಲ. ನಿಪಿ.10 ರಿಂದ 18 ರವರೆಗಿನ ದಾಖಲಾತಿಗಳನ್ನು ಈ ದಾವಾ ಆಸ್ತಿಗೆಂದು ನಾವು ಸೃಷ್ಟಿಸಿದ ದಾಖಲಾತಿ ಎಂದರೆ ಸರಿಯಲ್ಲ. ಚಿಕ್ಕಣ್ಣ ನವರು ನನ್ನ ತಾಯಿಯ ಗಂಡನಲ್ಲ ಹಾಗೂ ನನಗೆ ತಂದೆಯಲ್ಲ ಹಾಗೂ ಅವರು ನನಗೆ ಎಂದಿಗೂ ಸಂಬಂದಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನನಗೆ ಈ ದಾವಾ ಆಸ್ತಿಯಲ್ಲಿ ಯಾವ ಭಾಗಾಂಶವೂ ಸಲ್ಲುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.